APMC ಅಧ್ಯಕ್ಷರೆಲ್ಲರೂ ಕೂಡ ಸದಸ್ಯರಾಗಿದ್ದಾರೆ ಅಧಿಕಾರ ಕೊಡುವುದರ ಪರವಾಗಿ ನಾವೂ ಕೂಡ ಇದ್ದೇವೆ ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಂಡರೆ ಪೂರ್ಣವಾದ ಉತ್ತರವನ್ನು ಕೊಡುತ್ತೇನೆ

ಅಧ್ಯಕ್ಷರು – ಆಯಿತು

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಕಾರ್ಯಕ್ರಮ

60(258) ಶ್ರೀ ಕುಮಾರ ಬಂಗಾರಪ್ಪ ಎಸ್ (ಸೊರಬ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳು ಸೇರ್ಪಡೆಗೊಂಡಿರುತ್ತದೆ ,

ಆ) ಈ ಕಾರ್ಯಕ್ರಮ ಅನುಷ್ಠಾನಗೊಂಡಿದೆಯೇ ಅನುಷ್ಠಾನಗೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕೆ ಸಚಿವರು)

ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಗೆ ಸೇರ್ಪಡೆಯಾಗಿರುವ ರಾಜ್ಯದ ಜಿಲ್ಲೆಗಳು 1) ಬೆಂಗಳೂರು (ಗ್ರಾಮಾಂತರ), 2) ತುಮಕೂರು, 3) ಮೈಸೂರು, 4)ಕೋಲಾರ, 5) ಚಿತ್ರದುರ್ಗ, 6) ಬೆಳಗಾಂ, 7) ಬಾಗಲಕೋಟೆ, 8) ಬಿಜಾಪುರ, 9)ಕೊಡಗು, 10) ಕೊಪ್ಪಳ, 11) ಹಾಸನ, 12) ಗುಲ್ಬರ್ಗ, 13) ಉಡುಪಿ, 14) ದಕ್ಷಿಣ ಕನ್ನಡ, 15) ಉಡುಪಿ, 16) ಶಿವಮೊಗ್ಗ, 17) ಚಿಕ್ಕಮಗಳೂರು

ಆ) ಹೌದು, ಅನುಷ್ಠಾನಗೊಂಡಿದೆ

ಶ್ರೀ ಎಸ್ ಕುಮಾರ ಬಂಗಾರಪ್ಪ – ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವ್ಯಾವ ಜಿಲ್ಲೆಗಳು ಒಳಪಟ್ಟಿವೆಂದು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರದಲ್ಲಿ 17 ಜಿಲ್ಲೆಗಳ ಹೆಸರುಗಳನ್ನು ಕೊಟ್ಟಿದ್ದಾರೆ ಮತ್ತೆ ಅನುಷ್ಠಾನಗೊಂಡಿದೆಯೇ ಎಂದು ಕೇಳಿರುವುದಕ್ಕೆ , ಹೌದು, "ಎಂದು ಉತ್ತರ ಕೊಟ್ಟಿದ್ದಾರೆ ಈ ಅನುಷ್ಠಾನಗೊಂಡಿರತಕ್ಕಂಥ ವಿಚಾರದ ಬಗ್ಗೆ ನಾನು ಮಾನ್ಯ ಉಪ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ ಇವತ್ತಿನ ದಿವಸ ಎಲ್ಲೆಲ್ಲಿ National Horticulture Mission Schemeಗೆ ಜಿಲ್ಲೆಗಳನ್ನು ಸೇರ್ಪಡೆ ಮಾಡಿದ್ದಾರೆಯೋ ಅಂಥ ಕಡೆ ಸಪೋರ್ಟಿಂಗ್ ಆಗಿ ಕೆಲವು ಕಾರ್ಯಕ್ರಮಗಳು ಅನುಷ್ಠಾನವಾಗಬೇಕಾದ ಅವಶ್ಯಕತೆ ಇದೆ

ವಿಶೇಷವಾಗಿ ನೀರಾವರಿ ಯೋಜನೆಗಳು ಇದರ ಪೂರಕವಾಗಿ ಹೋಗತಕ್ಕಂಥ ಅವಶ್ಯಕತೆ ಬಹಳಷ್ಟು ಇವೆ ಏಕೆಂದರೆ, National Horticulture Mission Schemeನಲ್ಲಿ ಕೇಂದ್ರ ಸರ್ಕಾರದವರು ಹಣ ಕೊಟ್ಟರೂ ಕೂಡ ನೀರಿನ ಅವಶ್ಯಕತೆ ಇರುತ್ತದೆ ದ್ರಾಕ್ಷಿ, ಗೋಡಂಬಿ, ಅನಾನಸ್, ಮಾವು ಇತರೆ 11 ಬೆಳೆಗಳನ್ನು ಒಣ ಪ್ರದೇಶದಲ್ಲಿ ಬೆಳೆಯತಕ್ಕಂಥ ತೋಟಗಾರಿಕೆ ಬೆಳೆಗಳನ್ನು ಇದರಲ್ಲಿ ಕಮರ್ಷಿಯಲ್ ಕ್ರಾಪ್ಸ್ ಆಗಿ ಮಾಡಿದ್ದಾರೆ ನಾನು ತಮ್ಮ ಮೂಲಕ ಮಾನ್ಯ ಉಪ ಮುಖ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಯ ಮತ್ತು ನೀರವಾರಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತ್‌ನಲ್ಲಿರತಕ್ಕಂಥ ಹಣವನ್ನು ಇವತ್ತಿನ ದಿವಸ National Horticulture Mission Schemeನಲ್ಲಿ ಸೇರ್ಪಡೆಯಾಗಿರುವ 17 ಜಿಲ್ಲೆಗಳಿಗೆ ಕೊಡಬೇಕಾದ ಅವಶ್ಯಕತೆ ಇದೆ ಇಲ್ಲದಿದ್ದರೆ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದರೂ ಏನು ಪ್ರಯೋಜನವಾಗುವುದಿಲ್ಲ ಈ ವರ್ಷ ಸುಮಾರು 1 ಕೋಟಿ ರೂಪಾಯಿ ಅಲ್ಲಿದೆ ಈಗ ಸಣ್ಣ ಮತ್ತು ಅತೀ ಸಣ್ಣ ರೈತರ ಫ್ಲ್ಯಾಟ್‌ನ್ನು ಗುರುತು ಮಾಡಬೇಕಾಗಿದೆ ಫ್ಲ್ಯಾಟ್‌ಗಳನ್ನು ಗುರುತು ಮಾಡತಕ್ಕಂಥ ಕೆಲಸ ಕೂಡ ಮಾರ್ಚ್ ತಿಂಗಳೊಳಗಾಗಿ ಮುಗಿಯಬೇಕಾಗಿದೆ ಆದರೆ, ಇಲ್ಲಿಯವರೆಗೆ ರಾಜ್ಯದಲ್ಲಿ Flatಗಳನ್ನು ಗುರುತು ಮಾಡತಕ್ಕಂಥ ಕೆಲಸ ಸಂಪೂರ್ಣವಾಗಿ ಮುಗಿದಿಲ್ಲ ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಒಂದು ತೀವ್ರತೆಯನ್ನು ತಾವು ಹೆಚ್ಚಿಸಬೇಕಾಗುತ್ತದೆ ಮಾರ್ಚ್ ತಿಂಗಳೊಳಗಾಗಿ ಗುರುತು ಮಾಡತಕ್ಕಂಥ ಕೆಲಸವಾಗದಿದ್ದರೆ ಹಣಕಾಸು ಯಥಾಪ್ರಕಾರ ಹಿಂದಿನ ವರ್ಷದ್ದು ಮತ್ತು ಮುಂದಿನ ವರ್ಷದ್ದೂ ಕೂಡ ಬರುತ್ತದೆ ಇದು 6 ವರ್ಷಗಳ ಕಾರ್ಯಕ್ರಮವಾಗಿದೆ ಈಗಾಗಲೇ ಮೂರು ವರ್ಷದ ಹಣಕಾಸನ್ನು ಮಾರ್ಕ್ ಮಾಡಿಕೊಂಡಿದ್ದೀರಿ ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ಮಾರ್ಗಸೂಚಿಯನ್ನು ತಯಾರು ಮಾಡಿ ಎಲ್ಲರಿಗೂ ಕಳುಹಿಸಿಕೊಟ್ಟಿದ್ದೀರಿ ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಬೇಕಾಗಿರತಕ್ಕಂಥ ವ್ಯವಸ್ಥೆಗಳನ್ನು ತ್ವರಿತಗತಿಯಲ್ಲಿ ಮಾಡತಕ್ಕಂಥ ಅವಶ್ಯಕತೆ ಇನ್ನೂ ಬಹಳ ಇದೆ ಆದ್ದರಿಂದ ಇದಕ್ಕೆ ತಾವು ಹೆಚ್ಚಿನ ಅವಶ್ಯಕತೆ ಕೊಡಬೇಕಾಗಿದೆ ಇವತ್ತಿನ ದಿವಸ ಇದಕ್ಕೆ ಯಾವುದೇ ಹಣಕಾಸಿನ ತೊಂದರೆ

ಕೂಡ ಇಲ್ಲ ಇದಕ್ಕೆ ಇರತಕ್ಕಂಥ ಸಪೋರ್ಟಿಂಗ್ ಇಲಾಖೆಗಳಿಗೂ ಕೂಡ ಸರ್ಕಾರ ಮಾರ್ಗದರ್ಶನ ಕೊಡಬೇಕಾಗುತ್ತದೆ ಈ 17 ಜಿಲ್ಲೆಗಳಲ್ಲಿ ನೀರಾವರಿ ಮತ್ತು ಕೃಷಿ ಇಲಾಖೆಯವರು ಜಂಟಿಯಾಗಿ ಕೆಲಸ ಮಾಡುವ ಅವಶ್ಯಕತೆ ಇದೆ ತಾವು ದಯಮಾಡಿ ನಾನು ಕೇಳಿರತಕ್ಕಂಥ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎನ್ ಧರ್ಮಸಿಂಗ್ –ಮಾನ್ಯ ಕುಮಾರ ಬಂಗಾರಪ್ಪನವರು ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ 2005–2006ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅಲೋಕೇಶನ್ 85 ಕೋಟಿ ರೂಪಾಯಿಗಳು ಇದರಲ್ಲಿ ಈಗಾಗಲೇ 44 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಆದರೆ, Utilization Certificate ಅನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕೊಟ್ಟಿಲ್ಲ ಇವತ್ತಿನ ದಿವಸ ಎಷ್ಟು ಹಣ ಖರ್ಚಾಗಿದೆ ಎಂಬ Utilization Certificate ಅನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದರೆ ರಾಜ್ಯಕ್ಕೆ 133 ಕೋಟಿ ರೂಪಾಯಿ ಸಿಗುತ್ತದೆ ಆದರೆ, ಇವತ್ತು ತೊಂದರೆಯಾಗಿರುವುದರಿಂದ ರಾಜ್ಯಕ್ಕೆ ಬರಬೇಕಾಗಿರತಕ್ಕಂಥ 40 ಕೋಟಿ ರೂಪಾಯಿ ಅನುದಾನ ಬಂದಿಲ್ಲ ಒಟ್ಟಾರೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಗಿರತಕ್ಕಂಥ ಹಣದಲ್ಲಿ ಕೇವಲ 25% ನಷ್ಟು ಮಾತ್ರ ಇವತ್ತು ಖರ್ಚು ಮಾಡಿದ್ದೀರಿ ಈ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇದೆ ತೋಟಗಾರಿಕೆಯನ್ನು ಅಭಿವೃದ್ಧಿಗೊಳಿಸತಕ್ಕಂಥ ರೀತಿಯಲ್ಲಿ ಮತ್ತು ರೈತರ ಆತ್ಮಹತ್ಯೆಗಳನ್ನು ತಡೆಯತಕ್ಕಂಥ ರೀತಿಯಲ್ಲಿ ಹಾಗೆಯೇ, ಈ ರಾಜ್ಯದ ರೈತರಿಗೆ ಉಪಯೋಗವಾಗತಕ್ಕಂಥ ಕಾರ್ಯಕ್ರಗಳನ್ನು ರೂಪಿಸಲು ಇವತ್ತಿನ ದಿವಸ ರಾಜ್ಯ ಸರ್ಕಾರ ಏನು ಮಾಡುತ್ತಿಲ್ಲ ಮತ್ತೆ ಅಧಿಕಾರಿಗಳು ತಮ್ಮ ಹತೋಟಿಯಲ್ಲಿ ಇಲ್ಲ ಇವತ್ತಿನ ದಿವಸ ಕೇಂದ್ರದಲ್ಲಿ ಮಾನ್ಯ ಪಟ್ನಾಯಕ್‌ರವರು ಇದ್ದಾರೆ ಮತ್ತೆ ಅಲ್ಲಿ ನಮ್ಮ ಬೆಂಗಳೂರಿನವರೂ ಸಹ ಇದ್ದಾರೆ ಇವತ್ತಿನ ದಿವಸ ಈ ರೀತಿಯಾದ ತಾರತಮ್ಯಗಳಿವೆ ಇವತ್ತಿನ ಈ ಸರ್ಕಾರ ಹಣ ಉಪಯೋಗ ಮಾಡಿರುವ ಬಗ್ಗೆ utilization certificate ಅನ್ನು ಕೊಟ್ಟಿಲ್ಲ ಮತ್ತೆ ಇವತ್ತಿನ ದಿವಸ ಕೊಟ್ಟಿರುವಂಥ ಹಣ ಕೂಡ ಖರ್ಚಾಗಿಲ್ಲ ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಹಚ್ಚಿನ ಗಮನ ಕೊಡಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ – ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರ ಬಂಗಾರಪ್ಪನವರು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ ನಮ್ಮ ಇಲಾಖೆ 17 ಜಿಲ್ಲೆಗಳಲ್ಲಿ ಈ ಒಂದು ಕಾರ್ಯಕ್ರಮವನ್ನು ಅನುಷ್ಟಾನಗೊಳಿಸಿದೆ ಕಡಿಮೆ ನೀರು ಇದ್ದಾಗ ಹನಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಅವರು ಹೇಳಿದ್ದಾರೆ ಇವತ್ತಿನ ದಿವಸ ಇದರಲ್ಲಿ ಹಣ ಇದೆ ನಮ್ಮಲ್ಲಿ ಅಧಿಕಾರಿಗಳ ಕೊರತೆ ಇತ್ತು ಅನೇಕ ಅಧಿಕಾರಿಗಳನ್ನು ತೆಗೆದುಕೊಳ್ಳಲು ಕಳೆದ ತಿಂಗಳು ಮಾನ್ಯ ಉಪ ಮುಖ್ಯ ಮಂತ್ರಿಗಳು ಅನುಮತಿ ಕೊಟ್ಟಿದ್ದಾರೆ ಇನ್ನು ಎರಡು ತಿಂಗಳಲ್ಲಿ ಸರಿಹೋಗುತ್ತದೆ ಮಾರ್ಚ್ ತಿಂಗಳೊಳಗಾಗಿ ಈ ಕೆಲಸ ಆಗಬೇಕಾಗಿತ್ತು ಆದರೆ, ವಿಳಂಬವಾಗಿದೆ ಮತ್ತೆ ಕಳೆದ 10–15 ವರ್ಷಗಳಿಂದ ಈ ರೀತಿಯಾಗಿ ನಡೆದು ಬಂದಿದೆ ಈಗ ಅದನ್ನು ಸರಿ ಮಾಡುತ್ತೇವೆ 1200 ಜನರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ ತಕ್ಷಣವೇ ನೇಮಕ ಮಾಡಿಕೊಳ್ಳುತ್ತೇವೆ ಮಾನ್ಯ ಮಾಜಿ ಮುಖ್ಯ ಮಂತ್ರಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈಗಾಗಲೇ 37 ಕೋಟಿ ರೂಪಾಯಿಗಳ Utilization certificate ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ ಇದು ಕೊಟ್ಟ ನಂತರ ನಮಗೆ ಮೊದಲ ಕಂತಾಗಿ ಜೂನ್ 26ನೇ ತಾರೀಖಿನ ದಿವಸ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ ಮಾರ್ಚ್ 2006ರಲ್ಲಿ 44 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು ಇದರಲ್ಲಿ 37 ಕೋಟಿ ರೂಪಾಯಿ ಖರ್ಚು ಮಾಡಿ Utilization certificate ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ ಈಗ ಕೊಟ್ಟಿರುವ 10 ಕೋಟಿ ರೂಪಾಯಿಗಳ ಜೊತೆಗೆ ದಿನಾಂಕ 21 1 2007 ರಲ್ಲಿ 73 40 ಕೋಟಿ ರೂಪಾಯಿ National Horticulture ನಿಂದ ಬಂದಿದೆ ಕೇಂದ್ರ ಸರ್ಕಾರದವರು ನಮಗೆ ಈಗಾಗಲೇ 113 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು ಅದರ ಪೈಕಿ ಈಗ 73 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಈ ಹಣದಲ್ಲಿ ನಾವು 12 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಉಳಿದಿರತಕ್ಕಂಥ ಹಣವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು ಮಾರ್ಚ್ ತಿಂಗಳೊಳಗಾಗಿ ಕೆಲಸವನ್ನು ಮುಗಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ನಾನು ಅವರಿಗೆ ತೊಂದರೆಯನ್ನು ಕೊಡುವುದಿಲ್ಲ ನಮ್ಮ ರಾಜ್ಯಕ್ಕೆ ಸಿಗಬೇಕಾಗಿರುವುದು 133 ಕೋಟಿ ರೂಪಾಯಿಗಳು , ಇದರಲ್ಲಿ ಇವರು 12 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ ಈಗ ಅವರು ಏನು ಹೇಳಿದ್ದಾರೆಂದರೆ ಈಗ ನಾವು ಸದ್ಯಕ್ಕೆ 35 ಕೋಟಿ ರೂಪಾಯಿಗಳಿಗೆ Utilization certificateನ್ನು ಕಳುಹಿಸಿದ್ದೇವೆಂದು ಹೇಳಿದರು ಈಗ 35 ಕೋಟಿ ರೂಪಾಯಿಗಳ Utilization certificateನ್ನು ಕಳುಹಿಸಿದರೂ ಕೂಡ ಇನ್ನು ಇವರು 97 ಕೋಟಿ ರೂಗಳಿಂದ ವಂಚಿತರಾಗುತ್ತಾರೆ ಅಂದರೆ ಯಾವ ರೀತಿಯಾಗಿ, ಒಂದು ಕಡೆ ಕೇಂದ್ರಸರ್ಕಾರವನ್ನು ಬೈದುಕೊಂಡು ಹೋಗುತ್ತಾರೆ, ಅಥವಾ ಇರತಕ್ಕಂತಹ ಹಣವನ್ನಾದರೂ ಕೂಡ ಖರ್ಚು ಮಾಡುವುದಿಲ್ಲ ಈ ಬಗ್ಗೆ ಮೀಟಿಂಗ್‌ನ್ನು ಕೂಡ ಮಾಡುವುದಿಲ್ಲ Utilization ಬಗ್ಗೆ ಇವರು ನೋಡುವುದಿಲ್ಲ ಹಾಗೂ ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ದುಡ್ಡು ಇದ್ದರೂ ಕೂಡ ಖರ್ಚು ಮಾಡುವಂತಹ, ತಾಕತ್ತು ಕೂಡ ಇವರಿಗಿಲ್ಲ ಈ 133 ಕೋಟಿ ರೂಪಾಯಿಗಳಲ್ಲಿ ಕೇವಲ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಹೇಗೆ? ಅಧ್ಯಕ್ಷರೆ, ಇದರ ಬಗ್ಗೆ ತಾವೇ ಹೇಳಿ ಅದು ಕೊನೆಗೆ ಈಗ Fresh information ಕೊಡುವುದು, 37 ಕೋಟಿ ರೂಪಾಯಿಗಳಿಗೆ certificateನ್ನು ಕೊಟ್ಟಿರುವುದು 37 ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಬಗ್ಗೆ ಒಪ್ಪಿಕೊಳ್ಳೋಣ But still you are loosing 97 crores ಏಕೆಂದರೆ, ಕೆಲಸಕ್ಕೆ ಬಾರದೇ ಇರುವಂತಹ ಅಧಿಕಾರಿಗಳನ್ನು ಹಾಕಿಕೊಳ್ಳುವುದು ಏನು ಪ್ರಯೋಜನವಿಲ್ಲ ಅವರು ಕೆಲಸವನ್ನು ಕೂಡ ಮಾಡುವುದಿಲ್ಲ ನಮ್ಮ ಮುಜುಗರಕ್ಕೆ ಇವತ್ತು ಸಿಕ್ಕಿಬಿದ್ದು ಅನೇಕ ಕಡೆ ಇದೇ ರೀತಿಯಾಗಿ ಮಾಡುತ್ತಿದ್ದಾರೆ ಇದನ್ನು ಯಾರೇ ಮಾಡಲಿ

ಶ್ರೀ ಜೆ ಸಿ ಮಾಧುಸ್ವಾಮಿ ಇವರು Scheme ಗಳನ್ನು Implement ಮಾಡುವುದಕ್ಕೆ ಆಗುವುದಿಲ್ಲ ನರ್ಸರಿಗಳನ್ನು identify ಮಾಡಿರುವುದೆಲ್ಲಿ, ನಿಮ್ಮ ಹತ್ತಿರ ಇರುವ ನೋಂದಾಯಿತ ನರ್ಸರಿಗಳು ಯಾವುದು, ಆಂಧ್ರಪ್ರದೇಶದ ನರ್ಸರಿಗಳನ್ನು identify ಮಾಡುವುದಕ್ಕೆ ನಿಮಗೆ ಹೇಳಿದವರು ಯಾರು? ಈ ರಾಜ್ಯದಲ್ಲಿ ಸಸಿಗಳನ್ನು ಬೆಳೆದುಕೊಡುವವರು

ಇಲ್ಲವೆ? ಈ ರಾಜ್ಯದಲ್ಲಿ Scheme ಮಾಡಿರುವವರು ಎಲ್ಲಿ ಸಾರ್, contractorನಿಂದ ಹಿಡಿದು ಒಂದು ಸಪೋಟಾ ಗಿಡವನ್ನು ತರಬೇಕಾದರೆ ಕರ್ನಾಟಕದವರು ಆಂಧ್ರಕ್ಕೆ ಹೋಗುವಂತಹ ಸ್ಥಿತಿ ಈ ಸರ್ಕಾರದಲ್ಲಿ ನಿರ್ಮಾಣವಾಗಿದೆ ತಾವು ಏನು recognize nursury ಇದೆ ಅದನ್ನು ನಿಮ್ಮ Horticulture farmನಲ್ಲಿ ಬೆಳೆಸಬಹುದಾಗಿತ್ತು ರೈತರ ಹತ್ತಿರ ಬೆಳೆದಿರುವಂತಹ ಸಸಿಗಳನ್ನು certify ಮಾಡಿ ತೆಗೆದುಕೊಳ್ಳಬಹುದಾಗಿತ್ತು ನಾವೆಲ್ಲರೂ ತಂದು ಹಾಕಿದ್ದೇವೆ, ನೀವು ಇಂತಹ ನರ್ಸರಿಯಿಂದ ತಂದಿಲ್ಲವೆಂದು reject ಮಾಡುತ್ತಿದ್ದಾರೆ ಇಂತಹ ಕಡೆಯಿಂದ drip ಹಾಕಿಲ್ಲವೆಂದು reject ಮಾಡುತ್ತಿದ್ದಾರೆ practical ಆಗಿ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಈ ಬಗ್ಗೆ ತಾವು ತಕ್ಷಣ ಕುಳಿತುಕೊಂಡು ಮೀಟಿಂಗ್ ಮಾಡಿ ಸ್ವಲ್ಪ set right ಮಾಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಕೆಲವು ನರ್ಸರಿಗಳು ಇವೆ ಆ ನರ್ಸರಿಯಲ್ಲಿ ಕೆಲವರು Night watch man ಆಗಿ Daily ಕೆಲಸವನ್ನು ಮಾಡಿಕೊಂಡು ಬರುತ್ತಿದ್ದರು ಅವರನ್ನು ಸಹ ಕೆಲಸದಿಂದ ತೆಗೆದುಹಾಕಿದ್ದಾರೆ ಅವರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಕ್ಕೆ ಅಧಿಕಾರವಿಲ್ಲವೆಂದು ಮಾಡಿದ್ದಾರೆ ಈಗ ಇರುವಂತಹ ವ್ಯವಸ್ಥೆಯನ್ನು ಬದಲಾವಣೆ ಮಾಡುತ್ತಿದ್ದಾರೆ

ಅಧ್ಯಕ್ಷರು ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಯಾರು ಅಧಿಕಾರಿಗಳು ಜವಾಬ್ದಾರರಾಗಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇದು ನಿಮ್ಮ Horticulture missionನಲ್ಲಿ include ಆಗಿದೆ ಮಾನ್ಯ ಮುಖ್ಯಮಂತ್ರಿಗಳು ಅನುಮೋದನೆಯನ್ನು ಕೊಟ್ಟಿದ್ದಾರೆಂದು ನೀವು ಹೇಳುತ್ತೀರಿ ನೀವು recruitment ಮಾಡುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ

ಅಧ್ಯಕ್ಷರು ಮಾನ್ಯ ಬಿ ಆರ್ ಪಾಟೀಲ್‌ರವರೆ, ತಾವು ಮಾತನಾಡಿ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ 500 ಜನ ವಾಚ್‌ಮೆನ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿರುವುದರಿಂದ ಅವರನ್ನು ತೆಗೆದುಕೊಳ್ಳುತ್ತೇವೆ ಈ ಸಾರಿ ಹೊಸದಾಗಿ ನೇಮಕಾತಿ ಮಾಡಿಕೊಳ್ಳಬೇಕು

ಅಧ್ಯಕ್ಷರು ಮಾನ್ಯ ಬಿ ಆರ್ ಪಾಟೀಲ್‌ರವರು, ಉಪ ಪ್ರಶ್ನೆಯನ್ನು ಕೇಳುತ್ತಾರೆ, ನಂತರ ಬೇರೆಯವರು ಕೇಳಬಹುದು

ಶ್ರೀ ಬಿ ಆರ್ ಪಾಟೀಲ್ ಈಗ ಇವರು ಏನು ದುಡ್ಡು ಖರ್ಚು ಮಾಡಿದ್ದಾರೆ, ಇದರ ಬಗ್ಗೆ ಮಂತ್ರಿಗಳು ವಿವರವನ್ನು ಕೊಡಬೇಕು ಯಾವ್ಯಾವ ಬಾಬತ್ತಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ, ಬೀಜಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ, ಹನಿ ನೀರಾವರಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಈಗ ತಾವು 12 ಕೋಟಿ ರೂ ಗಳನ್ನು ಖರ್ಚು ಮಾಡಿರುವ ಬಗ್ಗೆ ಏನು ಲೆಕ್ಕ ಇದೆ, ಅದು ಕೂಡ ವಾಸ್ತವಿಕವಾಗಿ ಖರ್ಚು ಮಾಡಿರುವುದಿಲ್ಲ ಒಂದು ಎಕರೆ ಬೀಜ ಹಾಕಿದರೆ 10 ಎಕರೆಗೆ ಬೀಜವನ್ನು ಸಪ್ಲೈ ಮಾಡಿದ್ದೇವೆಂದು ಅದರಲ್ಲಿ ಬೋಗಸ್ ಹೆಸರುಗಳನ್ನು ಬರೆದಿದ್ದಾರೆ ಬೀಜವನ್ನು ಸಪ್ಲೈ ಮಾಡುವವರು ಮತ್ತು ಮಾರುವವರು ಇವರೆಲ್ಲರೂ ಸೇರಿಕೊಂಡು ಲೂಟಿಯನ್ನು ಮಾಡಿದ್ದಾರೆ ಮಾನ್ಯ ಮಂತ್ರಿಗಳು ಈ ಬಗ್ಗೆ evaluation ಮಾಡಿಸಬೇಕು, ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ

ಶ್ರೀ ಕುಮಾರ ಬಂಗಾರಪ್ಪ ಈ ಕಾರ್ಯಕ್ರಮದ ಅಡಿಯಲ್ಲಿ ಸಸಿ ಕೊಡುವುದು ಇಷ್ಟಕ್ಕೆ ಸೀಮಿತವಾಗಿಲ್ಲ ಇದರಲ್ಲಿ refrigerator ದಿಂದ ಹಿಡಿದು ಮಾರ್ಕೆಟಿಂಗ್‌ವರೆಗೆ ಎಲ್ಲಾ ಕಾರ್ಯಕ್ರಮಗಳು ಇವೆ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದ ಹಾಗೆ, ನಾವು ಸಸಿಗಳನ್ನು ತರುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೇವೆ ಏಕೆಂದರೆ, approval ಇಲ್ಲವೆಂದು ನೋಡುತ್ತಿದ್ದೇವೆ ಇಲ್ಲಿ ನಾವು ಕಾರ್ಯಕ್ರಮಗಳನ್ನು ಪೂರ್ಣ ಹಂತದಲ್ಲಿಯೇ ನೋಡಬೇಕೇ ಹೊರತು ಇದನ್ನು ಸಬಾರ್ಡಿನೇಟಾಗಿ Agriculture Department, Marketing Department, Horticulture Department, ಇವೆಲ್ಲವನ್ನು ನೋಡಿಕೊಂಡು ನಾವು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕು ಇದರಲ್ಲಿ ಎಲ್ಲವೂ piece piece ಆಗುತ್ತಿದೆ ಯಾರ್ಯಾರೋ NGO ಗಳನ್ನು ಮಾಡಿಕೊಂಡು ಅವರ ಮುಖಾಂತರವೇ ಕಾರ್ಯಕ್ರಮಗಳನ್ನು ಮಾಡುವುದು, ಅವರು ಯಾರ ಹೆಸರನ್ನು ಹೇಳುತ್ತಾರೋ ಅದನ್ನು ಟಿಕ್ ಮಾಡಿಕೊಂಡು ಹೋಗುವುದು ಈ ತರಹ ಮಾಡುವುದರಿಂದ ಯಾವ ಉದ್ದೇಶದಿಂದ National Horticulture Mission ಪ್ರಾರಂಭ ಮಾಡಿದ್ದಾರೆ, ಆ ಉದ್ದೇಶ ಸಫಲವಾಗುವುದಿಲ್ಲ

ದಯಮಾಡಿ ತಾವು ಈ ಬಗ್ಗೆ ತೀಕ್ಷ್ಣವಾಗಿ ತೆಗೆದುಕೊಳ್ಳಬೇಕು ಈ ಬಗ್ಗೆ ತಾವು ಮಾಹಿತಿಯನ್ನು ನಮಗೆ ಕೊಡಬೇಕಾಗುತ್ತದೆ ಇದರಲ್ಲಿ ಹಳೆಯ ಧಾರವಾಡ ಜಿಲ್ಲೆ, ಧಾರವಾಡ, ಗದಗ, ಹಾವೇರಿ ಈ ಜಿಲ್ಲೆಗಳನ್ನು ಇದರಲ್ಲಿ ತರುವಂಥ ಅವಶ್ಯಕತೆ ಇದೆ ಹಾಗಾಗಿ ಈ ಜಿಲ್ಲೆಗಳನ್ನು ಈ mission ಅಡಿಯಲ್ಲಿ ತರುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ

ಶ್ರೀ ಎನ್ ಎಸ್ ಭೋಸರಾಜು ರಾಯಚೂರ ಜಿಲ್ಲೆಯನ್ನು ಸೇರಿಸಬೇಕೆಂಬ ಪ್ರಸ್ತಾವನೆ ಬಂದು ಬಹಳ ದಿವಸಗಳಾಯಿತು ಪಪ್ಪಾಯಿ ಹಾಗೂ ಅನೇಕ crops ಗಳನ್ನು ಬೆಳೆಯುತ್ತಿದ್ದಾರೆ ರಾಯಚೂರು ಜಿಲ್ಲೆಯ ಇಲಾಖೆಯ ವತಿಯಿಂದ ಬಂದಿರುವ ಮಾಹಿತಿಯನ್ನು ತಾವು ಗಮನಿಸಿಲ್ಲವೆಂದು ಕಾಣುತ್ತದೆ

ಅಧ್ಯಕ್ಷರು ಆಯಿತು ಬಿಡಿ, ಬಹಳ ಚರ್ಚೆಯಾಗಿದೆ

ಶ್ರೀ ಕುಮಾರ್ ಬಂಗಾರಪ್ಪ ಬಹಳ ಚರ್ಚೆಯಾಗಿದೆ ಎಂದರೆ , ಉತ್ತರ ಕೊಡುವುದು ಬೇಡವೆ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ ನರ್ಸರಿಗಳ ಬಗ್ಗೆ ತಕ್ಷಣ ಆಧ್ಯತೆಯನ್ನು ಕೊಡುತ್ತಿದ್ದೇವೆ ತೋಟಗಾರಿಕೆ ಇಲಾಖೆಯ NHM ಒಳಗಡೆ ಸಸಿಗಳನ್ನು ಬೆಳೆಸುವುದನ್ನು ಮಾಡುತ್ತೇವೆ ಮಾನ್ಯ ಸದಸ್ಯರು ಹೇಳಿರುವುದು ನಿಜ ಬೇರೆ ಬೇರೆ ರಾಜ್ಯಗಳಿಗೆ ಪಕ್ಕದ ಮಹಾರಾಷ್ಟ್ರ ಹಾಗೂ ಆಂಧ್ರದೊಳಗಡೆ ಕಡಿಮೆ ಬಿದ್ದಾಗ ಸಸಿಯನ್ನು ತರುವಂಥದ್ದು ಪ್ರತಿವರ್ಷ ಮಾಡುತ್ತಿದ್ದರು ಈ ವರ್ಷ ಹೆಚ್ಚಿಗೆ ಏನು ಸಸಿಯನ್ನು ಬೆಳೆಯುತ್ತಿದ್ದೇವೆ ಅದಕ್ಕಿಂತ 50% ಹೆಚ್ಚಿಗೆ ಸಸಿಗಳನ್ನು ಬೆಳೆಯಬೇಕು, ಇದರ ಜೊತೆಗೆ Co-Operative ಅಡಿಯಲ್ಲಿ ಸಸಿಗಳನ್ನು ಬೆಳೆಸುವುದಕ್ಕೆ ಅನೇಕ ರೈತರು ಮುಂದೆ ಬಂದಂಥ ಹಿನ್ನಲೆಯಲ್ಲಿ ಅವರಿಗೂ ಸಹಿತ ಇವತ್ತು ಆದ್ಯತೆಯನ್ನು ನಾವು ನಿಜವಾಗಿ ಕೊಡುತ್ತೇವೆ ಇವತ್ತು ಏನು ಹಣ ಖರ್ಚಾಗಿಲ್ಲವೆಂದು ಮಾನ್ಯ ಖರ್ಗೆಯವರು ಹೇಳುತ್ತಿದ್ದಾರೆ ನಿಜವಾಗಿಯೂ ಬಂದಂಥ ಹಣ ಮೊದಲನೇ ಕಂತು 133 ಕೋಟಿ ರೂಗಳು ಏನು ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ, ಮೊದಲನೇ ಕಂತಾಗಿ ಜೂನ್ 2006ಕ್ಕೆ 10ಕೋಟಿ ರೂಗಳನ್ನು ಕೊಟ್ಟಿದ್ದಾರೆ ಎರಡನೇ ಕಂತಾಗಿ ಜನವರಿ 20, 2007ಕ್ಕೆ 73 ಕೋಟಿ ರೂಗಳ ಹಣ ಬಂದಿದೆ ಆ ಕಾರಣದಿಂದಾಗಿ ಅಲ್ಲಿ

ಹಣವನ್ನು ಖರ್ಚು ಮಾಡುವುದಕ್ಕೆ ತೊಂದರೆಯಾಗಿದೆ ನಮಗೆ ಈಗಾಗಲೇ ಸಾಕಷ್ಟು ಅಧಿಕಾರಿಗಳನ್ನು ತೆಗದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ ಅನೇಕ recruitment ಗಳನ್ನು ಮಾಡಲಾಗಿದ್ದು, ADH ಗಳು, DDA ಗಳು, ಇವತ್ತು ನೇಮಕಾತಿಯಾಗಿದ್ದಾರೆ ಹೆಚ್ಚಿನ ಆದ್ಯತೆಯನ್ನು ಅಲ್ಲಿಗೆ ಕೊಟ್ಟು ಸಸಿಗಳನ್ನು ಬೆಳೆಸುವಂಥದ್ದು ಇದರ ಜೊತೆಗೆ ಹನಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದು, ನಮ್ಮ ಉದ್ದೇಶವಾಗಿದೆ

ಅಧ್ಯಕ್ಷರು ಆಯಿತು

ಶ್ರೀ ಜೆ ಸಿ ಮಾಧುಸ್ವಾಮಿ ಇನ್ನು ಆಗಿಲ್ಲ ಸಾರ್ ಸ್ವಲ್ಪ ಕೇಳಿ Horticulture farm ಗಳಿಂದ 10 ಗಿಡಗಳನ್ನು ಬೆಳೆದಿಲ್ಲ

ಅಧ್ಯಕ್ಷರು ಆಯಿತು

ಶ್ರೀ ಜೆ ಸಿ ಮಾಧುಸ್ವಾಮಿ ಏನಾಯಿತು ಸಾರ್

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ ಕೆಲಸ ಮಾಡಿಸುವಂಥದ್ದನ್ನು ನಾವು ಮಾಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಮಂತ್ರಿಗಳೇ, 300 Horticulture farm ಗಳಿಂದ 10 ಗಿಡಗಳನ್ನು ಬೆಳೆದಿಲ್ಲ ಕರ್ನಾಟಕ ರಾಜ್ಯದವರಿಗೆ ಒಬ್ಬರಿಗೂ ಕೊಡಲಿಲ್ಲ ಇವತ್ತು ಸಸಿಗಳನ್ನು ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಿಂದ ದುಡ್ಡು ಕೊಟ್ಟು ತಂದಿದ್ದಾರೆ

ಅಧ್ಯಕ್ಷರು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜೆ ಸಿ ಮಾಧುಸ್ವಾಮಿ ಹೀಗೆ ಹೇಳಿದರೆ ಹೇಗೆ ಸ್ವಾಮಿ

ಅಧ್ಯಕ್ಷರು ಆಯಿತು ಬಿಡಿ ಈಗಾಗಲೇ ಚರ್ಚೆ ಪ್ರಾರಂಭವಾಗಿ 20 ನಿಮಿಷವಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ ಏನಾಯಿತು ಹೇಳಿ

ಅಧ್ಯಕ್ಷರು ಮಾನ್ಯ ಮಾಧುಸ್ವಾಮಿಯವರೆ, ಈ ಪ್ರಶ್ನೆ ಚರ್ಚೆ ಪ್ರಾರಂಭವಾಗಿ 20 ನಿಮಿಷಗಳಾಗಿದೆ ಎಲ್ಲರೂ ಸಹ ತಮ್ಮ ತಮ್ಮ ಸಲಹೆಗಳನ್ನು ಹಾಗೂ ಉಪ ಪ್ರಶ್ನೆಗಳನ್ನು ಕೇಳಿದ್ದೀರಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ ಮಾನ್ಯ ಸದಸ್ಯರು ಮುಖ್ಯ ಪ್ರಶ್ನೆ ಹಾಕಿರುವವರು ಮಾತನಾಡಿದ್ದಾರೆ ಅವರಿಗೆ ನಾನು ಎರಡು-ಮೂರು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಈ ರೀತಿ ಮಾಡಿದರೆ ಹೇಗೆ? BAC ಯಲ್ಲಿ ಪ್ರಶ್ನೋತ್ತರವನ್ನು ಒಂದು ಗಂಟೆಯಲ್ಲಿ ಮುಗಿಸಿ ಎಂದು ನೀವೇ

ಹೇಳುತ್ತೀರಿ ಒಂದು ಪ್ರಶ್ನೆಗೆ 15 ಅಥವಾ 20 ನಿಮಿಷ ತೆಗೆದುಕೊಂಡರೆ ಹೇಗೆ?

ಶ್ರೀ ಜೆ ಸಿ ಮಾಧುಸ್ವಾಮಿ Horticulture Mission ಗೆ ಒಂದು ಗಿಡಕ್ಕೆ ಈ ರಾಜ್ಯದಲ್ಲಿರುವ ನರ್ಸರಿಗೆ ಅಪ್ರೂವ್ ಮಾಡದೇ ಪಕ್ಕದ ರಾಜ್ಯವಾದ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಿಂದ ಸಸಿಗಳನ್ನು ತರಿಸಿದ್ದಾರೆ ರೈತರು ಸಸಿಗಳನ್ನು ಬೆಳೆದು ಕೊಡುತ್ತೇವೆಂದು ಹೇಳಿದರೂ ಅವರಿಗೆ ಅವಕಾಶವನ್ನು ಕೊಟ್ಟಿರುವುದಿಲ್ಲ 300 ಚಿಲ್ಲರೆ Horticulture farm ಗಳು ಇವೆ ಅವುಗಳನ್ನು ಇಟ್ಟುಕೊಂಡು ಇವರು ಏನು ಮಾಡುತ್ತಿದ್ದಾರೆ

ಅಧ್ಯಕ್ಷರು ಮಾನ್ಯ ಮಾಧುಸ್ವಾಮಿಯವರೆ, ಈ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ detail ಆಗಿ ಮಾತನಾಡಬಹುದು

ಶ್ರೀ ಜೆ ಸಿ ಮಾಧುಸ್ವಾಮಿ ಅವರು ಏನು ಮಾಡುತ್ತಿದ್ದಾರೆ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ ನಾವು ಸಸಿಗಳನ್ನು ಕೊಡುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ ಇವರು 300 farm ಗಳನ್ನು ಇಟ್ಟುಕೊಂಡು ಒಂದು farm ನಲ್ಲಿ 100 ಗಿಡಗಳನ್ನು ಬೆಳೆಯಲಿಲ್ಲ ಇವತ್ತು ಆ farm ಗಳು ಇರಬೇಕಾ? 60 ರಿಂದ 100 ಎಕರೆಯವರೆಗೆ farm ಗಳು ಇವೆ ಒಂದೊಂದು farm ಗಳಿಂದ ಮಾಹಿತಿಯನ್ನು ತರಿಸಿ 10–12 farm ಗಳಿರುವ ಜಿಲ್ಲೆಗಳಲ್ಲಿಯೂ ಬೆಳೆಯಲಿಲ್ಲ

ಅಧ್ಯಕ್ಷರು ಆಯಿತು, ಬೆಳೆದಿಲ್ಲ ರಾಜ್ಯಪಾಲರ ವಂದನಾ ನಿರ್ಣಯದಲ್ಲಿ ಇದರ ಬಗ್ಗೆ ಹೇಳಿ ಅವರಿಂದ ಉತ್ತರವನ್ನು ಪಡೆದುಕೊಳ್ಳಿ ಈಗ ಇದನ್ನು ಕ್ಲೋಸ್ ಮಾಡೋಣ ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಸಂಪೂರ್ಣವಾಗಿ ತೋಟಗಳೆಲ್ಲವೂ ಒಣಗಿ ಹೋಗಿದೆ ತೋಟದಲ್ಲಿ ಗಿಡಗಳು ಇಲ್ಲ ತಾವು ಒಂದು ಸಾರಿ ತೋಟಗಳನ್ನು ನೋಡಿಕೊಂಡು ಬನ್ನಿ ಇದನ್ನು ಹೇಗೆ ಸರಿಪಡಿಸುತ್ತೀರಿ ಅದರಲ್ಲಿ 17 ಜಿಲ್ಲೆಗಳು ಸೇರಿದೆ ನಮ್ಮ ಚಾಮರಾಜನಗರ ಜಿಲ್ಲೆಯನ್ನು ಬಿಟ್ಟಿದ್ದೀರಿ

ಅಧ್ಯಕ್ಷರು ಮಾನ್ಯ ಸಚಿವರು ತಾವುಗಳು ಹೇಳುವುದನ್ನೆಲ್ಲಾ ಕೇಳಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಮಂತ್ರಿಗಳು ಹೊಸಬರಾಗಿದ್ದಾರೆ ಈ Chıef Secretaryಯವರುಗಳು ಏನು ಮಾಡುತ್ತಾರೆ? ತಿಂಗಳಿಗೆ ಒಂದು ಕೆಡಿಪಿ ಮೀಟಿಂಗ್ Atleast ಅಲ್ಲಿಯಾದರೂ dıscuss ಅಗಬೇಕಲ್ಲವೆ?

ಶ್ರೀ ಸಿದ್ದರಾಮಯ್ಯ(ಚಾಮುಂಡೇಶ್ವರಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೊಸಬರಾಗಿದ್ದಾರೆ ಅವರ ಹತ್ತಿರ ನಾವು ತಪ್ಪುಗಳನ್ನು ಕಂಡುಹಿಡಿಯುತ್ತಿಲ್ಲ ಅವರಿಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ ಮಾನ್ಯ ಸದಸ್ಯರು ಪ್ರಶ್ನೆಯನ್ನು ಬಹಳ ಸ್ಪಷ್ಟವಾಗಿ ಕೇಳಿದ್ದಾರೆ 300ಕ್ಕಿಂತ ಹೆಚ್ಚು ಅಲ್ಲಿ hortıculture farmಗಳು ಇವೆ ಅಲ್ಲಿ ಇವರಿಗೆ ಕೃಷಿಯನ್ನು ಬೆಳೆಯುವುದಕ್ಕೆ ಏನು ಕಷ್ಟ ? ಇಲ್ಲಿ ಬೆಳೆಯದೇ ಅಥವಾ ರೈತರಿಗೂ ಕೊಡದೇ farmನಲ್ಲಿ ಬೆಳೆಯುವುದಕ್ಕೆ ಆಗದೆ ಹೋದರೆ ಆಂಧ್ರದಿಂದ ಅಥವಾ ಬೇರೆ ರಾಜ್ಯದಿಂದ ಸಸಿಗಳನ್ನು ತರಿಸಿಕೊಳ್ಳುವಂತಹ ಅಂತಹ ಪರಿಸ್ಥಿತಿ ಏನು ನಿರ್ಮಾಣವಾಗಿದೆ ಇದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡುವುದಕ್ಕೆ ಏನು ಕಷ್ಟ? ಇದಕ್ಕೆ ಅವರಿಂದ ಉತ್ತರವೇ ಇಲ್ಲ ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಹೇಳಬೇಕಲ್ಲವೇ?

ಅಧ್ಯಕ್ಷರು ಮಾನ್ಯ ಸಿದ್ದರಾಮಯ್ಯನವರೆ, ಈ ಪ್ರಶ್ನೆ ಕೇಳಿ ಈಗಾಗಲೇ 20 ನಿಮಿಷಗಳಾಗಿದೆ

ಶ್ರೀ ಸಿದ್ದರಾಮಯ್ಯ ನಾನು ಟೈಮ್ ಬಗ್ಗೆ ಹೇಳುತ್ತಿಲ್ಲ

ಅಧ್ಯಕ್ಷರು ಅವರು ಉಪಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಹಾಗೆಯೇ ಉತ್ತರವನ್ನು ಕೊಡಬೇಕೆಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ ಮಾನ್ಯ ಅಧ್ಯಕ್ಷರೆ, ತಾವು ಕೇಳಬೇಕು, ಸರ್ಕಾರ ಈ ಬಗ್ಗೆ ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟರೆ, ಯಾವುದೇ ಗೊಂದಲವಿಲ್ಲದೆ ಉತ್ತರವನ್ನು ಕೊಟ್ಟರೆ ಟೈಮ್ ಎಲ್ಲಿ ವೇಸ್ಟ್ ಆಗುತ್ತದೆ ಮಾನ್ಯ Hortılculture Mınısterರವರೇ ತಾವು ದಯಮಾಡಿ ಕೇಳಬೇಕು ಈಗ ನಿಮಗೆ 300 ಚಿಲ್ಲರೆ farmಗಳು ನಿಮ್ಮ ಹತ್ತಿರ ಇದೆ ಅಥವಾ 400 ಇದೆಯಾ ಓ ಕೆ ಇನ್ನು ಜಾಸ್ತಿ ಇದೆ ಬಹಳ ಸಂತೋಷವಾಯಿತು ನಾವು 400 farmಗಳನ್ನು ಇಟ್ಟುಕೊಂಡು ಬೇರೆ ರಾಜ್ಯದಿಂದ ಸಸಿಗಳನ್ನು

ತರಿಸಿಕೊಳ್ಳುವಂತಹ ಏನು ಪ್ರಮೇಯ ಬಂದೊದಗಿದೆ ? ನಮ್ಮಲ್ಲಿ ಅಧಿಕಾರಿಗಳು ಇಲ್ಲವೆಂದು ಕಾರಣವನ್ನು ಹೇಳುತ್ತೀರಿ ಅಧಿಕಾರಿಗಳು ಇಲ್ಲವೆಂದು ನೆಪ ಹೇಳುವುದಕ್ಕೆ ಆಗುವುದಿಲ್ಲ ನಿನ್ನೆ ಮತ್ತು ಮೊನ್ನೆ ಅಧಿಕಾರಿಗಳು ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ ತಾವು ಇರತಕ್ಕಂತಹ ಅಧಿಕಾರಿಗಳ ಹತ್ತಿರವೇ ಕೆಲಸವನ್ನು ತೆಗೆದುಕೊಳ್ಳಬೇಕು ಆ 400 farmಗಳನ್ನು ಇಟ್ಟುಕೊಂಡು ಏನು ಮಾಡುವುದು? ಅವುಗಳಿಗೆ ಖರ್ಚು ಮಾಡುವಂತಹ ಹಣ ವೇಸ್ಟ್ ಆಗುತ್ತಿದೆ ಅಲ್ಲಿರುವಂತಹ ಅಧಿಕಾರಿಗಳಿಗೆ ಕೊಡುವಂತಹ ಸಂಬಳ ವೇಸ್ಟ್ ಆಗುತ್ತಿದೆ Whole group ನೀವು ಮಾಡದೇ ಹೋದರೂ ಕೂಡ Director,Secretary, ಅಥವಾ ಬೇರೆ ಅಧಿಕಾರಿಗಳು, ಅವರನ್ನಾದರೂ ಕೂಡ ನೋಡಬೇಕಲ್ಲ ಇಂತಹ ಸಣ್ಣ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲವೆ ? ಅತ್ಯಂತ ಪ್ರಾಮುಖ್ಯವಾದಂತಹ National Horticulture Mission ಇದೆಯಲ್ಲಾ ಅದು 2 ವರ್ಷದಿಂದಲೇ, ಅಂದರೆ ನಾನು 2005–06ನೇ ಸಾಲಿನ ಬಜೆಟ್‌ನ್ನು ಮಂಡಿಸುವಾಗ ಅದರ ಬಗ್ಗೆ ಹೇಳಿದ್ದೇನೆ ಅದು ಕೇಂದ್ರಸರ್ಕಾರದ programme ಆಗಿದೆ ಅದನ್ನು ಮಾಡುವ ಬಗ್ಗೆ ಇನ್ನು ಹೆಚ್ಚು ದುಡ್ಡನ್ನು ಕೊಟ್ಟಿದ್ದೇವೆ, ನಾವು ಖರ್ಚು ಮಾಡಿರುವುದು 12 ಕೋಟಿ ರೂಪಾಯಿಗಳು, ಅಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೆಂದರೆ, ಇಂತಹ programmeಗಳು ಜನರಿಗೆ ಯಾವ ರೀತಿಯಲ್ಲಿ ತಲುಪುತ್ತದೆ ? ಎಲ್ಲಾ ಕಾರ್ಯಕ್ರಮಗಳು ವಿಫಲವಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿರುವಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ ಇದರಲ್ಲಿ ಲೋಪದೋಷಗಳು ಆಗಿದೆ ಹಾಗೂ ವಿಳಂಬವಾಗಿದೆ, ಇದರಲ್ಲಿ ಯಾವುದೇ ಸಂಶಯ ಇಲ್ಲ ನಾವು 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದು ಸಮರ್ಥನೀಯವಾದುದಲ್ಲ, ಮತ್ತು ನಾವು ಬಳಸದೇ ಇರುವುದು ಕೂಡ ಸಮರ್ಥನೀಯವಾದುದಲ್ಲ ದಯಮಾಡಿ ತಮ್ಮ ಈ ಸಲಹೆಯ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಇವತ್ತು ವಿಶೇಷ ಸಭೆಯನ್ನು ಕರೆಯುತ್ತಾರೆ ತಮ್ಮ ಸಲಹೆ ಸೂಚನೆಗಳನ್ನು ಪಡೆದುಕೊಂಡು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಇದರಲ್ಲಿ ಲೋಪವಾಗಿದೆ, ದಯವಿಟ್ಟು ಕ್ಷಮಿಸಬೇಕೆಂದು ಕೇಳುತ್ತೇನೆ

ಅಧ್ಯಕ್ಷರು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 29ನೇ ಜನವರಿ 2007ರಂದು 1ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 10 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಹಾಗೂ ದಿನಾಂಕ 31ನೇ ಜನವರಿ 2007ರಂದು 2ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ5 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 30 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ದಿನಾಂಕ 0–2–02–2007ರಂದು 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 51 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು (ಅನುಬಂಧ–1)

3 ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ (ಎರಡನೇ ಪಟ್ಟಿ)

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

I ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೆ,

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಪರಿಚ್ಛೇದ 12(7)ರ ಅನ್ವಯ

1 ಶ್ರೀ ಮಹ್ಮದ್ ಖಲೀಮುಲ್ಲಾ ಕೆ ಎ ಎಸ್, ಅಧಿಕಾರಿ ಅವರಿಗೆ ಸಂಬಂಧಿಸಿದಂತೆ ಸನ್ಮಾನ್ಯ ಉಪ ಲೋಕಾಯುಕ್ತರವರು ಸಲ್ಲಿಸಿದ ವಿಶೇಷ ವರದಿ ಹಾಗೂ ವಿವರಣಾತ್ಮಕ ಟಿಪ್ಪಣಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಪೋಲಿಸ್ ಗೃಹ ನಿರ್ಮಾಣ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ

1 ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ